ಸಿವಿಲ್ ಮತ್ತು ಜೆಎಮಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
<u>ಸಿ.ಸಿ ನಂಃ **1916 / 2022**</u>

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಶ್ರೀಧರ್ ನಿರೋಣಿ | ಫ್ರಾಸಾಃ **05** |
| ತಂದೆ ಹೆಸರುಃ | ಅಶೋಕ | ಚಾಸಾಃ **08** |
| ವಯಸ್ಸುಃ | **31** ವರ್ಷ | ದಿಃ **24.02.2026** |
| ಉದ್ಯೋಗಃ | ಅಬಕಾರಿ ನೀರಿಕ್ಷಕರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಆಳಂದ | |

<u>ಮುಖ್ಯ ವಿಚಾರಣೆಃ</u> ಮಾನ್ಯ ಸ.ಸ.ಅ.ರಿಂದಃ

ನಾನು ಜುಲೈ 2019 ರಿಂದ ಡಿಸೆಂಬರ್ 2023 ವರೆಗೆ ಯಾದಗಿರಿ ಅಬಕಾರಿ ವಲಯದಲ್ಲಿ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 18-07-2022 ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾಃ 1 ರವರಿಂದ ಪಡೆದು ಪರಿಶೀಲಿಸಿ, ದಿನಾಂಕಃ 29-07-2022 ರಂದು ಮಾದರಿ ಮು. ಮಾಲನ್ನು ಚಾಸಾಃ 6 ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇನು. ದಿನಾಂಕಃ 03-08-2022 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನು. ದಿನಾಂಕಃ 30-08-2022 ರಂದು ಗುನ್ನೆ ಜಾಗದ ಮಾಲೀಕತ್ವದ ವರದಿ ನೀಡುವಂತೆ ಅನಪೂರ ಗ್ರಾಮ ಪಂಚಾಯತಿಗೆ ಪತ್ರ ಬರೆದಿದ್ದೇನು. ದಿನಾಂಕಃ 05-09-2022 ರಂದು ಸದರಿಯವರಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನು. ಆರೋಪಿ ಗುನ್ನೆ ಜಾಗದ ಮಾಲೀಕನಾಗಿರುವುದು ಕಂಡುಬಂದಿರುತ್ತದೆ. ದಿನಾಂಕಃ 20-08-2022 ರಂದು ಆರೋಪಿ ಸ್ವ-ಖುಷಿ ಹೇಳಿಕೆ ನೀಡಿರುತ್ತಾರೆ. ಆರೋಪಿ ದಾಳಿ ಸಮಯದಲ್ಲಿ ಪೊಲಿಸರನ್ನು ನೋಡಿ ಓಡಿ ಹೋಗಿದ್ದನು ಎಂದು ಒಪ್ಪಿಕೊಂಡಿರುತ್ತಾನೆ. ದಿನಾಂಕಃ 26-09-2022 ರಂದು ಚಾಸಾಃ 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನು. ನಂತರ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದೇನು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಆತ ತಮ್ಮ ಮುಂದೆ ತಪ್ಪೊಪ್ಪಿಗೆ ಮಾಡಿಕೊಂಡ ವ್ಯಕ್ತಿಯಾಗಿರುತ್ತಾನೆ ಎಂದು ನುಡಿಯುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು. ಮಾ. 1 ರಿಂದ 39 ರಲ್ಲಿನ ಮದ್ಯದಪ್ಯಾಕೆಟ ಹಾಗೂ ಬಾಟಲಿಗಳನ್ನು ನೋಡಿ ಅವುಗಳು ಮಾಡಿದ ಮದ್ಯದ ಪ್ಯಾಕೆಟ ಹಾಗೂ ಬಾಟಲಿಗಳು ಆಗಿರುತ್ತವೆ ಎಂದು ನುಡಿಯುತ್ತಾರೆ.

ನಿಪಿ-2 ರ ನಿವೇದನ ಪತ್ರದಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ), ಪಂಚಾಯತಿಗೆ ನೀಡಿದ ಪತ್ರವನ್ನು ನಿಪಿ-3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ), ಪಂಚಾಯತಿ ತೆರಿಗೆ ಬೇಡಿಕೆ ಪುಸ್ತಕದ ದೃಡಿಕೃತ ನಕಲು ಪ್ರತಿಯನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಮತ್ತು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಜಿ. ಆರ್. ವಕೀಲರಿಂದಃ</u>

ನಾನು ಗುನ್ಹೆ ಜಾಗಕ್ಕೆ ಭೇಟಿ ಕೊಟ್ಟಿಲ್ಲ. ಚಾಸಾಃ 4 ಮತ್ತು 5 ರವರ ಹೇಳಿಕೆಗಳಲ್ಲಿ, ಹೇಳಿಕೆ ಪಡೆದುಕೊಂಡ ದಿನಾಂಕ ನಮೂದು ಇಲ್ಲ ಎಂದರೆ ಸಾಕ್ಷಿಯು ದಿನಾಂಕಃ 03-09-2022 ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ಮಾದರಿ ಮು. ಮಾ. ಗಳ ಬ್ಯಾಚ್ ನಂಬರ ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ ಅದನ್ನು ಪೂರೈಸಿದ ದಿನಾಂಕ ನಮೂದು ಇಲ್ಲ ಎಂದರೆ ಸರಿ. ನಿಪಿ-4 ದಾಖಲೆ ನೀಡಿದ ಪಂಚಾಯತಿ ಅಧಿಕಾರಿಯ ಹೇಳಿಕೆಯನ್ನು ನಾನು ಪಡೆದುಕೊಂಡಿಲ್ಲ. ಆರೋಪಿ ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಈ ದಿನ ಆರೋಪಿಯನ್ನು ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಯಾವುದೇ ಸಾಕ್ಷಧಾರ ಇಲ್ಲದೆ ಇದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮು. ಮಾ. ಹಾಗೂ ಆರೋಪಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.